ದಿಃ 25.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಎನ್.ಹೆಚ್ ವಕೀಲರಿಂದ ,**

1. ನಾನು ಕಡದಕಟ್ಟೆಯಲ್ಲಿ 20 ವರ್ಷದಿಂದ ವಾಸವಾಗಿರುತ್ತೇನೆ. ನನ್ನ ಗಂಡ ವೀರಭದ್ರಯ್ಯ ಮೃತ ಪಟ್ಟಿರುತ್ತಾರೆ ಅವರು ಸರ್ಕಾರಿ ಉದ್ಯೋಗ್ಯದಲಿದ್ದರು ಎಂದರೆ ಸರಿ. ನಾನು 15 ವರ್ಷದಿಂದ ಬಟ್ಟೆ ವ್ಯಾಪಾರ ಮಾಡುತ್ತಿದ್ದೇನೆ. ನಾನು ಬೆಂಗಳೂರು ಮತ್ತು ದಾವಣೆಗೆರೆಯಿಂದ ಬಟ್ಟೆಯನ್ನು ತರಿಸುತ್ತೇನೆ. ನಾನು ವ್ಯವಹಾರವನ್ನು ಫೋನ್ ಪೇ ಮತ್ತು ಚೆಕ್ ಮೂಖಾಂತರ ಮಾಡುತ್ತೇನೆ ಎಂದರೆ ಸರಿ.

2. ಪ್ರತಿವಾದಿಗಳು ಮಂಜಪ್ಪನ ಹೆಂಡತಿ ಮಕ್ಕಳು ಎಂದರೆ ಸರಿ. ಮಂಜಪ್ಪನವರು ಕೆ.ಎಸ್ ಆರ್ ಸ.ಸಿಯಲ್ಲಿ ಹೆಡ್ ಕಾನ್ ಸ್ಟೇಬಲ್ ಆಗಿದ್ದರು ಎಂದರೆ ಸರಿ. ಮಂಜಪ್ಪನವರು ನನಗೆ ಸುಮಾರು 10 ವರ್ಷದಿಂದ ಪರಿಚಯವಿರುತ್ತಾರೆ. ದಿಃ 09-12-2022 ರಂದು ಮಂಜಪ್ಪನವರು ಮೃತ ಪಟ್ಟಿರುತ್ತಾರೆ. ನಾನು ಕಡದಕಟೆಟಯಲ್ಲಿರುವ ನಮ್ಮ ಮನೆಯಲ್ಲಿ ಮಂಜಪ್ಪನವರಿಗೆ ಸಾಲದ ಹಣವನ್ನು ಕೊಟ್ಟಿರುತ್ತೇನೆ. ನಾನು ಹಣ ಕೊಡುವುದಕ್ಕಿಂತ 01 ತಿಂಗಳ ಮುಂಚ್ಚೆ ನನಗೆ ಹಣ ಬೇಕೆಂದು ಕೇಳಿರುತ್ತಾರೆ. ನಾನು ಹಣವನ್ನು ಕೆ,ಎಸ್ ಆರ್ .ಸಿ ಯಲ್ಲಿ ಕೆಲಸ ಮಾಡುವ ರಾಘವೇಂದ್ರರವರ ಸಮಕ್ಷಮದಲಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಗುರುಮೂರ್ತಿ, ಆನಂದಕುಮಾರ್ ರವರು ಹಾಜರಿದ್ದರು. ದಿಃ10-02-2021 ರಂದು ನಾನು ಹಣವನ್ನು ಕೊಟ್ಟಿರುತ್ತೇನೆ. ಆ ದಿವಸ ನನ್ನ ಬಳಿ ಅಷ್ಟೊಂದು ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಾನು ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ನಾನು ಮನೆ ಮಾರಾಟ ಮಾಡಿರುತ್ತೇನೆ ಆ ಸಮಯದಲ್ಲಿ ನನಗೆ ಅವರು ನಗದು ರೂಪದಲ್ಲಿ ಹಣ ಕೊಟ್ಟಿದ್ದರು ಅದನ್ನು ನಾನು ಮನೆಯಲ್ಲೇ ಇಟ್ಟಿದ್ದೆ.

ನಾನು ಹಣವನ್ನು ಕೆ,ಎಸ್ ಆರ್ ಸಿ ಯಲ್ಲಿ ಕೆಲಸ ಮಾಡುವ ರಾಘವೇಂದ್ರರವರ ಸಮಕ್ಷಮದಲಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಮೂರ್ತಿ ಮತ್ತು ಆನಂದಕುಮಾರ್ ಸಮಕ್ಷಮದಲ್ಲಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆನಂದಕುಮಾರ್ ರವರು ಪ್ರನೋಟ್ ಅನ್ನು ಬರೆದಿರುತ್ತಾರೆ ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ. ರಾಘವೇಂದ್ರರವರು ಹುತ್ತಾಕಲೋನಿಯಲ್ಲಿ ವಾಸವಾಗಿರುತ್ತಾರೆ. ದಿಃ 10-02-2021 ರಂದು ಮಂಜಪ್ಪನವರು 07 ಲಕ್ಷ ಹಣವನ್ನು ನನ್ನಿಂದ ಪಡೆದು ನಿಪಿ-01 ಪ್ರನೋಟ್ ಅನ್ನು ಬರೆದುಕೊಟ್ಟು ಮಾಸಿಕ 2 ರಷ್ಟು ಬಡ್ಡಿಯನ್ನು ಕೊಡುತ್ತೇನೆಂದು ಹೇಳಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-01 ಕ್ಕೆ ಮಂಜಪ್ಪನವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-01 ರಲ್ಲಿರುವ ಸಹಿಗಳು ಮತ್ತು ಹೆಬ್ಬೆಟ್ಟು ಮಂಜಪ್ಪನವರದ್ದಲ್ಲ ಎಂದರೆ ಸರಿಯಲ್ಲ. ಹಣ ಕೊಟ್ಟ ದಿವಸವೇ ನಿಪಿ-01 ಅನ್ನು ಬರೆದಿರುತ್ತಾರೆ. ಆನಂದಕುಮಾರ್ ರವರು ನಿಪಿ-01 ಅನ್ನು ಬರೆದಿರುತ್ತಾರೆ. ಮಂಜಪ್ಪನವರು ಸಹಿ ಮಾಡಿರುವ ಇಂಕ್ ಗೂ ಮತ್ತು ಬರವಣಿಗೆ ಬಳಸುವ ಇಂಕ್ ಗೂ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ನನಗೆ ಮಂಜಪ್ಪ ಯಾರೆಂದು ಗೊತ್ತೇ ಇಲ್ಲ ಎಂದರೆ ಸರಿಯಲ್ಲ. ನಾನು ಮಂಜಪ್ಪನವರಿಗೆ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರಾಘವೇಂದ್ರರವರು ಸಹಾಯದಿಂದ ನಿಪಿ-01 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಘವೇಂದ್ರರವರು ನಮ್ಮ ಊರಿನವರು. ಮಂಜಪ್ಪನವರು ಯಾವಾಗಲೂ ಮದ್ಯಪಾನ ಸೇವನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ರಾಘವೇಂದ್ರ ರವರು ಮಂಜಪ್ಪನವರ ಕುಡಿತದ ಚಟವನ್ನು ದುರುಪಯೋಗಪಡಿಸಿಕೊಂಡು ಈ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ನಾನು 500 ರೂ ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ಹಣ ಕೊಡುವ ಸಮಯದಲ್ಲಿ ನಾನು ಭಾವಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ಮಂಜಪ್ಪನವರು ಎಂದೂ ನನ್ನಿಂದ ಸಾಲ

ಪಡೆದಿಲ್ಲ ಮತ್ತು ಬಡ್ಡಿಯನ್ನು ನನ್ನ ಖಾತೆಗೆ ಜಮಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-02 ನನ್ನ ಬ್ಯಾಂಕ್ ಖಾತೆಗೆ ಸೇರಿದ ವಿವರಗಳಾಗಿರುತ್ತವೆ. ನಾನು ಬಟ್ಟೆಯನ್ನು ಖರೀದಿ ಮಾಡಿದಾಗ ಹಣ ಪಾವತಿ ಮಾಡಿದ ಬಗ್ಗೆ ನನ್ನ ಬ್ಯಾಂಕ್ ಖಾತೆಯಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಎರಡು ಬ್ಯಾಂಕ್ ಖಾತೆ ಇದ್ದು, ಎರಡರಲ್ಲೂ ಪಾವತಿ ಮಾಡಿರುತ್ತೇನೆ. ನಿಪಿ-02 ರಲ್ಲಿ ಮಂಜಪ್ಪನವರು ನನಗೆ ಹಣ ಕೊಟ್ಟಿದ್ದಾರೆ ಎಂದು ತೋರಿಸಲು ಈ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ.

6. ನಾನು ಯಾವುದೇ ಫೈನಾನ್ಸ ಸಂಸ್ಥೆಯಿಂದ ಸಾಲ ಪಡೆದಿರುವುದಿಲ್ಲ. ನಾನು ಮಣಿಪುರಂ ಫೈನಾನ್ಸ ಸಂಸ್ಥೆಯಿಂದ ದಿಃ 28-03-2022 ರಂದು ರೂ.4,73,825/- ಅನ್ನು ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ದಿಃ 04-04-2022 ರಂದು Micro Finance ರವರಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ.

7. ಬ್ಯಾಂಕ್ ಮೂಖಾಂತರ ನನಗೆ ಹಣ ಪಾವತಿ ಮಾಡಿದರೆ ಅಥವಾ ನಾನು ಬ್ಯಾಂಕ್ ಮುಖಾಂತರ ಬೇರೆಯವರಿಗೆ ಹಣ ಪಾವತಿ ಮಾಡಿದರೆ ಅದು ನನ್ನ ಬ್ಯಾಂಕ್ ಖಾತೆಯಲ್ಲಿ ನಮೂದಾಗುತ್ತದೆ ಎಂದರೆ ಸರಿ. ಮಂಜಪ್ಪ ಎನ್ನುವವರು ಯಾರೋ ನನ್ನ ಬಟ್ಟೆ ವ್ಯಾಪಾರದ ಗ್ರಾಹಕರಾಗಿದ್ದು ಅವರು ನನ್ನ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಿರುತ್ತಾರೆ ಹೊರತು 01 ಪ್ರತಿವಾದಿ ಯ ಗಂಡ ಮಂಜಪಪನವರು ನನ್ನ ಬ್ಯಾಂಕ್ ಖಾತೆಗೆ ಎಂದೂ ಹಣ ಜಮಾ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ಮಂಜಪ್ಪನವರು ಫೋನ್ ಪೇ ಮುಖಾಂತರವೇ ಹಣ ನನ್ನ ಖಾತೆಗೆ ವರ್ಗಾವಣೆ ಮಾಡುತ್ತಿದರು ಎಂದು ತೋರಿಸಲು ಮಂಜಪ್ಪನವರಿಗೆ ಸೇರಿದ ಫೋನ್ ಪೇ ಮೂಲಕ ಪಾವತಿ ಮಾಡಿದ ವಿವರಗಳ ಪಟ್ಟಿಯನ್ನು ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮಂಜಪ್ಪನವರು ಬಳಿ ಫೋನ್ ಪೇ ಅಕೌಂಟ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಮಂಜಪ್ಪನವರಿಗೆ ರೂ. 7 ಲಕ್ಷ ಸಾಲ ಕೊಡಲು ನನಗೆ ಶಕ್ತಿ ಇರಲಿಲ್ಲ ನಾನು ಬೇರೆಯವರಿಂದ ಸಾಲ ಮಾಡಿಕೊಂಡಿದೆ ಎಂದರೆ ಸರಿಯಲ್ಲ.

ನಾನು ನಿಪಿ–4 ದಾಖಲೆಯ ಪ್ರಕಾರ ಮನೆಯನ್ನು ಮಾರಾಟ ಮಾಡಿದ ಬಂದತಹ ಹಣನಮ್ನು ನನ್ನ ವ್ಯಾಪಾರಕ್ಕೆ ಬಳಸಿರುತ್ತೇನೆ ಹೊರತು ಮಂಜಪ್ಪನವರಿಗೆ ಸಾಲವಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ರಾಘವೇಂದ್ರ ರವರು ಹಣ ಪಡೆಯುವ ಸಲುವಾಗಿ ಈ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–01 ರಲ್ಲಿ ಸಹಿ ಮತ್ತು ಹೆಬ್ಬೆಟ್ಟು ಗುರುತುಗಳನ್ನು ನಾನೇ ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಮಂಜಪ್ಪನವರ ಸಹಿ ಎಂದು ತೋರಿಸಲು ಅವರು ಕೆಲಸ ಮಾಡುತ್ತಿದ್ದ ಸರ್ಕಾರಿ ದಾಖಲೆಯನ್ನು ತಂದು ಹಾಜರು ಪಡಿಸಿರುವುದಿಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ